

## ನಾವಿಕರಿಗೆ ಸೃಷ್ಟಿಯಾದ ಪಿ ಕೋಟ್

ಪಿ ಕೋಟ್‌ಗಳ ಮೂಲ ಪಾಶ್ಚಾತ್ಯ ದೇಶಗಳು. ವಿದೇಶಿ ಸಂಸ್ಕೃತಿಯ ಭಾಗವಾಗಿ ರೂಪುಗೊಂಡ ಪಿ ಕೋಟ್‌ಗಳ ಬಳಕೆಯು ವಿದೇಶಗಳಲ್ಲಿದ್ದಷ್ಟು ನಮ್ಮಲ್ಲಿಲ್ಲ. ಇಲ್ಲಿನ ಮೆಟ್ರೊ ನಗರಗಳಲ್ಲಿ ಮಾತ್ರ ಕಣ್ಣಿಗೆ ಬೀಳುತ್ತವೆ.

1800ನೇ ಇಸವಿಯು ಪಿ ಕೋಟ್‌ಗಳ ಉಗಮಕಾಲ. ನೌಕೆಗಳ ಮೂಲಕ ವರ್ಷಾನುಗಟ್ಟಲೆ ಪ್ರಪಂಚ ಸುತ್ತುತ್ತಿದ್ದ ನಾವಿಕರಿಗೆ ಅನುಕೂಲವಾಗಲೆಂದು ಸ್ವೆಟರ್ ರೂಪದಲ್ಲಿ ಈ ಪಿ ಕೋಟ್‌ಗಳನ್ನು ರೂಪಿಸಲಾಗಿದೆ. ಪಿ ಕೋಟ್ ಅನ್ನು ರೀಫರ್ ಜಾಕೆಟ್, ಆಫೀಸರ್ಸ್ ಕೋಟ್ ಅಂತಲೂ ಕರೆಯುವುದುಂಟು. ಪ್ರಾರಂಭದಲ್ಲಿ ಇದು ಡಬಲ್ ಬ್ರೆಸ್ಟೆಡ್ ಶೈಲಿಯಲ್ಲಿ ರೂಪುಗೊಂಡಿತ್ತು ಎನ್ನಲಾಗಿದೆ. ಹೀಗಾಗಿ ಪಿ ಕೋಟ್ ತನ್ನ ಗುರುತನ್ನು ನೌಕಾ ಕ್ಷೇತ್ರದಲ್ಲಿ ಲಂಗರು ಹಾಕಿ, ದಡಕ್ಕೆ ತಲುಪಿದ ನಂತರ ಅದರ ವ್ಯಾಪ್ತಿಯನ್ನು ಹೋದಲ್ಲೆಲ್ಲ ವ್ಯಾಪಿಸಿಕೊಂಡಿದ್ದರಿಂದ ಪಿ ಕೋಟ್ ಎಲ್ಲೆಮೀರಿ ವಿಸ್ತರಿಸಿದೆ.



ಗಾಢ ಬಣ್ಣದ, ಮಂದ ಬಟ್ಟೆಯಿಂದ ರೂಪುಗೊಳ್ಳುವ ಇವು ಚಳಿಗಾಲಕ್ಕೆ ತಕ್ಕ ಫ್ಯಾಷನ್ ಔಟ್‌ಫಿಟ್ ಅನ್ನುವುದರಲ್ಲಿ ಎರಡು ಮಾತಿಲ್ಲ. ಗಾಢಬಣ್ಣದ ಜೀನ್ಸ್ ಪ್ಯಾಂಟ್‌ನೊಂದಿಗೆ ಶರ್ಟ್ ಹಾಗೂ ಪಿ ಕೋಟ್ ಧರಿಸುವುದು ಕ್ಲಾಸಿಕ್ ಲುಕ್ ನೀಡುತ್ತದೆ. ಹಳೆಯ ಕಾಲದಲ್ಲೂ ಚಾಲ್ತಿಯಲ್ಲಿದ್ದ ಈ ಪಿ ಕೋಟ್‌ಗಳ ಜೊತೆಗೆ ವೃತ್ತಾಕಾರದ ಟೋಪಿ ಹಾಗೂ ಸ್ಟೋಲ್ ಧರಿಸುವ ಶೈಲಿ ಈಗಿನ ಕಾಲಕ್ಕೂ ಟ್ರೆಂಡಿ. ಚಳಿಗಾಲದ ಸುತ್ತಾಟಕ್ಕೆ, ಕೆಲಸ ಕಾರ್ಯಗಳ ವೇಳೆ ಪಿ ಕೋಟ್ ಸೂಕ್ತ ಆಯ್ಕೆ.

ಪಿ ಕೋಟ್ ಆಕರ್ಷಣೆಯೆಂದರೆ, ಅದರಲ್ಲಿನ ದೊಡ್ಡ ದೊಡ್ಡ ಗುಂಡಿಗಳು (ಬಟನ್‌ಗಳು). ಬ್ಲೇಜರ್ ರೀತಿ ಬಟನ್‌ಗಳನ್ನು ಹಾಕದೆಯೇ ಇದನ್ನು ಧರಿಸಬಹುದು. ಇದರ ಅಗಲ ಕಾಲರ್ ವಿಶೇಷ ಲುಕ್ ನೀಡುತ್ತದೆ. ಪಿ ಕೋಟ್ ಒಳಗೆ ಧರಿಸುವ ಶರ್ಟ್ ಎದ್ದು ಕಾಣುವ ಬಣ್ಣದಿಂದ ಕೂಡಿದ್ದರೆ ಇನ್ನೂ ವಿಶೇಷ ಮೆರುಗು ನಿಮ್ಮದಾಗಲಿದೆ. ಕೋಟ್ ಹಾಗೂ ಬ್ಲೇಜರ್ ಸೊಂಟದವರೆಗಿದ್ದರೆ, ಪಿ ಕೋಟ್‌ಗಳು ಮತ್ತಷ್ಟು ಉದ್ದವಿರುತ್ತವೆ. ಇದೇ ಈ ಕೋಟ್‌ನ ಹೆಚ್ಚುಗಾರಿಕೆ ಕೂಡ.

ನೇವಿ ಬಣ್ಣದ ಮೆಲ್ಟನ್ ವೂಲ್‌ನಲ್ಲೂ ಪಿಕೋಟ್ ಚೆಂದವೆನಿಸುತ್ತದೆ. ಧರಿಸಲೂ ಆರಾಮದಾಯಕ. ಕ್ಲಾಸಿಕ್ ಲುಕ್ ನೀಡುವುದರಲ್ಲಿ ಯಾವುದೇ ಅನುಮಾನವಿಲ್ಲ. ಬಹುದಿನಗಳ ಕಾಲ ಇದು ಬಾಳಿಕೆ ಬರಲು ಉತ್ತಮ ಗುಣಮಟ್ಟದ ಪಿ ಕೋಟ್‌ಗೆ ಹಣ ವ್ಯಯಿಸುವುದು ಸೂಕ್ತ. ವರ್ಷಾನುಗಟ್ಟಲೆ ಇದನ್ನು ಬಳಸಬಹುದು. ಕಡಿಮೆ ಹಣದ, ಕಡಿಮೆ ಬಜೆಟ್‌ನ ಪಿ ಕೋಟ್‌ಗಳು ಬಹುಬೇಗ ಹಳತಾಗುತ್ತವೆ. ತುಸು ದೊಡ್ಡ ಸೈಜ್‌ನ ಪಿ ಕೋಟ್‌ಗಳನ್ನು ಖರೀದಿಸುವುದು ಎಲ್ಲ ಸಮಯದಲ್ಲೂ ಸೂಕ್ತ. ಸರಿಯಾದ ಅಳತೆಯ ಪಿ ಕೋಟ್‌ಗಳು ಆರಾಮದಾಯಕ ಅನುಭವ ನೀಡುವುದರ ಬದಲು ಕಿರಿಕಿರಿ ಉಂಟುಮಾಡಬಹುದು. ಅದರ ಬದಲು ನಿಮ್ಮ ಸೈಜ್‌ಗಿಂತ ತುಸು ಹೆಚ್ಚಿನ ಅಳತೆಯ ಪಿ ಕೋಟ್ ಸರಿಹೊಂದುತ್ತದೆ.

ಕ್ಯಾಶುವಲ್ ಲುಕ್ ನೀಡುವ ಪಿ ಕೋಟ್‌ಗಳನ್ನು ಚಳಿಗಾಲಕ್ಕಷ್ಟೇ ಅಲ್ಲದೆ ಎಲ್ಲಾ ಸಮಯದಲ್ಲೂ ಬಳಸಬಹುದು. ಕಚೇರಿ ಕಾರ್ಯಕ್ರಮಗಳು, ಸಾಮಾಜಿಕ ಕಾರ್ಯಕ್ರಮಗಳು, ಗೆಟ್‌ಟುಗೆದರ್, ವಾರಾಂತ್ಯ ಹೊರಗೆ ಹೋಗುವ ಸಮಯದಲ್ಲೂ ಧರಿಸಿ ಮಿಂಚಬಹುದು.

ಪುರುಷರ ಪಿ ಕೋಟ್‌ಗಳು ನಾಲ್ಕು ವಿಧದಲ್ಲಿ ಲಭ್ಯ. ಕ್ಲಾಸಿಕ್, ಬ್ರಿಡ್ಜ್, ಸಿಂಗಲ್ ಬ್ರೆಸ್ಟೆಡ್ ಹಾಗೂ ಡಬಲ್ ಬ್ರೆಸ್ಟೆಡ್. ಸಿಂಗಲ್ ಬ್ರೆಸ್ಟೆಡ್‌ನಲ್ಲಿ ಒಂದು ಸಾಲಿನಲ್ಲಿ ಮಾತ್ರ ಬಟನ್‌ಗಳಿದ್ದರೆ, ಡಬಲ್ ಬ್ರೆಸ್ಟೆಡ್ ಪಿ ಕೋಟ್‌ನಲ್ಲಿ ಎರಡು ಸಾಲಿನ ಬಟನ್‌ಗಳು ಇರುತ್ತವೆ. ಈ ಮಾದರಿಯಲ್ಲಿ ಉದ್ದ ಮತ್ತು ಗಿಡ್ಡ ತೋಳುಗಳ ಆಯ್ಕೆಯಿವೆ.

ಪಿ ಕೋಟ್ ಇದೀಗ ಮಹಿಳಾ ವರ್ಗವನ್ನೂ ಆಕರ್ಷಿಸಿದೆ. ಪುರುಷರ ಪಿ ಕೋಟ್‌ಗಳಿಗಿಂತ ಅಂದ ಚೆಂದದ ಮಾದರಿಗಳು ಮಹಿಳೆಯರಿಗೂ ಲಭ್ಯವಾಗುತ್ತಿವೆ.

## ಬಣ್ಣದ ಲೋಕದಲ್ಲೂ ಪಿ ಕೋಟ್ ರಂಗು

ಪಿ ಕೋಟ್ ಎಂದಾಕ್ಷಣ, ಹಾಲಿವುಡ್ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುವವರ ಮೈಗಪ್ಪಿದ್ದ ಗಾಢ ಬಣ್ಣದ ಉಡುಪು ಕಣ್ಮುಂದೆ ಬರುತ್ತದೆ. ಎರಡೂ ಕೈಗಳನ್ನು ಮುಂಭಾಗದ ಎರಡೂ ಜೇಬಿಗಿಳಿಸಿಕೊಂಡು ತುಟಿಗಪ್ಪಿದ ಸಿಗಾರ್‌ನಿಂದ ಹೊಗೆ ಹೊರಸೂಸುತ್ತಾ ಹಿತವಾಗಿ ಬೀಳುವ ಹಿಮದ ನಡುವೆ ಹೆಜ್ಜೆಹಾಕುವ ನಟರಿಗೆ ಕ್ಲಾಸಿಕ್ ಲುಕ್ ನೀಡುವುದೂ ಇದೇ ಪಿ ಕೋಟ್.

ಹಾಲಿವುಡ್ ನಟರಾದ ಜೇಮ್ಸ್ ಡೀನ್, ರಾಬರ್ಟ್ ರೆಡ್‌ಫೋರ್ಡ್, ಟಾಮ್ ಕ್ರೂಸ್, ಜೇಮ್ಸ್ ಬಾಂಡ್ ಖ್ಯಾತಿಯ ಡೇನಿಯಲ್ ಕ್ರೇಗ್‌ನಿಂದ ಹಿಡಿದು ನಮ್ಮ ದೇಶದ ಅಮಿತಾಬ್ ಬಚ್ಚನ್, ಕಮಲ್ ಹಾಸನ್, ರಣವೀರ್ ಸಿಂಗ್, ವಿಜಯ್ ದೇವರಕೊಂಡವರೆಗೂ ಪಿ ಕೋಟ್‌ಗೆ ಮಾರುಹೋಗಿದ್ದಾರೆ. ದೀಪಿಕಾ ಪಡುಕೋಣೆ, ಪ್ರಿಯಾಂಕಾ ಚೋಪ್ರಾ, ರಶ್ಮಿಕಾ ಮಂದಣ್ಣ, ಸೋನಂ ಕಪೂರ್, ಮಗಧೀರನ ರಾಣಿ ಕಾಜಲ್ ಅಗರ್‌ವಾಲ್ ಮುಂತಾದವರು ಕೂಡ ಪಿ ಕೋಟ್ ಪ್ರಿಯರೇ.